# ನಿಮ್ಮೊಡನೆ

## ಶಿಕ್ಷಕರ ಕೊರತೆ ತುಂಬಿ...

**ಸ್ಪರ್ಧಾತ್ಮಕ ಜಗತ್ತಿನಲ್ಲಿ, ಶಿಕ್ಷಣ ಎಂಬುದು ರಾಷ್ಟ್ರದ ಅಭಿವೃದ್ಧಿ ಅಳೆಯುವ ಸಾಧನ. ಮಾನವ ಸಂಪನ್ಮೂಲ ಅಭಿವೃದ್ಧಿಗೆ ಬೇಕು ಗುಣಮಟ್ಟದ ಶಿಕ್ಷಕರು. ಆದರೆ ಶಿಕ್ಷಕ ವೃತ್ತಿ ಎಂಬುದು ಈಚಿನ ದಿನಗಳಲ್ಲಿ ಯುವಜನರಿಗೆ ಆಕರ್ಷಕ ಆಯ್ಕೆ ಆಗಿಲ್ಲ. ಏಕೆ ಹೀಗೆ?**



**ಭಾ**ರತದಲ್ಲಿ ಶಿಕ್ಷಕರ ಸಂಖ್ಯೆ ವಿಶ್ವದಲ್ಲೇ ಅತ್ಯಂತ ಕಡಿಮೆ. ಏಕೆ ಗೊತ್ತೆ? ಶಿಕ್ಷಕರ ಹುದ್ದೆ ಕಟ್ಟಕಡೆಯ ಆಯ್ಕೆ ಎಂಬಂತಹ ಸ್ಥಿತಿ ನಮ್ಮಲ್ಲಿದೆ. 'ಗುರು ಬ್ರಹ್ಮ' ಎಂದು ಆರಾಧಿಸಿ ಗುರುವಿಗೆ ಬಹು ದೊಡ್ಡ ಸ್ಥಾನಮಾನ ನೀಡಿರುವ ದೇಶದ 'ಬಡಮೇಷ್ಟ್ರ' ಕಥೆ ಇದು. ಏನೇನೊ ಕಾರಣಗಳಿಗಾಗಿ ಈ ದಿನಗಳಲ್ಲಿ ಶಿಕ್ಷಕ ವೃತ್ತಿ ಎಂಬುದು ಯುವಜನರಿಗೆ ಆಕರ್ಷಕ ಆಯ್ಕೆ ಆಗಿಲ್ಲ. ಹಲವು ಮಂದಿಗೆ ಬೇರೇನೂ ಒಳ್ಳೆಯ ಕೆಲಸ ಸಿಗದಿದ್ದಲ್ಲಿ ಇದು ಕಡೆಯ ಆಶ್ರಯ ಎಂಬಂಥ ಕಟುವಾಸ್ತವವೂ ನಮ್ಮೆದುರಿಗೆ ರಾಚುತ್ತಿದೆ. ಹೀಗಾಗಿ ಕಲಿಸುವ ಬಗ್ಗೆ ನಿಜವಾದ ಪ್ರೀತಿ, ಆಸಕ್ತಿ ಎಂಬುದು ಇಲ್ಲಿ ಗೌಣವಾಗಿರುತ್ತದೆ. ಸಮೀಕ್ಷೆಯೊಂದರ ಪ್ರಕಾರ, ಅಮೆರಿಕದಲ್ಲಿ ಹತ್ತು ಲಕ್ಷ ಜನರಿಗೆ 3200 ಶಿಕ್ಷಕರಿದ್ದಾರೆ. ಅರಬ್ ರಾಷ್ಟ್ರಗಳಲ್ಲಿ ಇದು 800. ಆದರೆ ಭಾರತದಲ್ಲಿ ಹತ್ತು ಲಕ್ಷ ಜನರಿಗೆ ಇರುವ ಶಿಕ್ಷಕರ ಸಂಖ್ಯೆ ಕೇವಲ 456.

ಇದೇ ವಿಚಾರವನ್ನು ಮೊನ್ನೆ ರಾಜ್ಯಸಭೆಯಲ್ಲೂ ಕೇಂದ್ರ ಮಾನವ ಸಂಪನ್ಮೂಲ ಸಚಿವ ಕಪಿಲ್ ಸಿಬಲ್ ಪ್ರಸ್ತಾಪಿಸಿದ್ದಾರೆ. ರಾಷ್ಟ್ರದಲ್ಲಿ 12 ಲಕ್ಷ ಶಿಕ್ಷಕರ ಕೊರತೆ ಇದ್ದು ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ತುಂಬಲು ಆದ್ಯತೆ ನೀಡಬೇಕಿದೆ ಎಂದಿದ್ದಾರೆ.

6ರಿಂದ 14ನೇ ವಯೋಮಾನದ ಮಕ್ಕಳಿಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಹಕ್ಕು (ಆರ್‌ಟಿಇ) ಈಗ ಕಾನೂನಾಗಿದೆ. ಆದರೆ ಇದರ ಜಾರಿಯಲ್ಲಿ ಶಿಕ್ಷಕರ ಕೊರತೆ ಬಹುಶಃ ದೊಡ್ಡದಾದ ಅಡ್ಡಿ. ಹಲವು ರಾಜ್ಯಗಳಲ್ಲಿ ಹಲವು ವರ್ಷಗಳಿಂದ ಶಿಕ್ಷಕರ ಹುದ್ದೆಗಳು ಭರ್ತಿಯೇ ಆಗಿಲ್ಲ. ಬಿಹಾರದಲ್ಲಿ ಸುಮಾರು 1,00,696 ಹುದ್ದೆಗಳು ಖಾಲಿ ಇವೆ ಎಂದು ಮತ್ತೆ ಕಪಿಲ್ ಸಿಬಲ್ ಅವರೇ ಹೇಳಿದ್ದಾರೆ. ಹೀಗಿದ್ದೂ ಕಳೆದ ಎರಡು ದಶಕಗಳತ್ತ ಹಿನ್ನೋಟ ಹಾಯಿಸಿದಲ್ಲಿ ಪ್ರಾಥಮಿಕ ಹಾಗೂ ಉನ್ನತ ಪ್ರಾಥಮಿಕ ಶಾಲಾ ಶಿಕ್ಷಕರ ಸಂಖ್ಯೆಯಲ್ಲಿ ಏರಿಕೆ ಇದೆ. ಕರ್ನಾಟಕವೂ ಸೇರಿದಂತೆ ಆಂಧ್ರಪ್ರದೇಶ, ಗುಜರಾತ್, ಹಿಮಾಚಲ ಪ್ರದೇಶ, ಮಧ್ಯಪ್ರದೇಶ ಹಾಗೂ ರಾಜಸ್ತಾನಗಳಲ್ಲಿನ ಗ್ರಾಮೀಣ ಪ್ರದೇಶಗಳಲ್ಲಿ ಹಿರಿಯ ಪ್ರಾಥಮಿಕ ಶಿಕ್ಷಕರ ಸಂಖ್ಯೆಯಲ್ಲಿ ಸಾಕಷ್ಟು ಹೆಚ್ಚಳ ಕಂಡುಬಂದಿದೆ ಎನ್ನುತ್ತವೆ ವರದಿಗಳು. ಆದರೇನು? ರಾಜ್ಯಗಳು, ಜಿಲ್ಲೆಗಳು ಹಾಗೂ ಜಿಲ್ಲೆಗಳ ಒಳಗೇ ಶಿಕ್ಷಕರ ಹಂಚಿಕೆಯಲ್ಲಿ ಅಸಮತೋಲನ ಎದ್ದು ಕಾಣುತ್ತಿದೆ. ಹಳ್ಳಿ– ನಗರಗಳ ಮಧ್ಯೆಯೂ ಅಪಾರ ಅಸಮತೋಲನವಿದೆ. ಹೇಗೆಂದರೆ, ಕೆಲವೆಡೆ ಒಂದೇ ಶಾಲೆಯಲ್ಲೇ ಸಾಕಷ್ಟು ಶಿಕ್ಷಕರಿರುತ್ತಾರೆ. ಮತ್ತೆ ಕೆಲವೆಡೆ ಶಿಕ್ಷಕರೇ ಇರುವುದಿಲ್ಲ. ಹೀಗಾಗಿ ಶಿಕ್ಷಕರ ಸಮಾನ ಹಂಚಿಕೆಗೆ ನೆರವಾಗುವಂತೆ ಶಿಕ್ಷಕರ ಮರು ನಿಯೋಜನೆಯ ಅಗತ್ಯವನ್ನು ಮನಗಾಣಬೇಕಿದೆ. ಶಿಕ್ಷಕರು ಹಾಗೂ ವಿದ್ಯಾರ್ಥಿಗಳ ಅನುಪಾತದ ರಾಷ್ಟ್ರೀಯ ಸರಾಸರಿ 1:42. ಬಿಹಾರದಲ್ಲಿ ಈ ಅನುಪಾತ 1:83ಯಷ್ಟು ಇದ್ದು ಸಮಸ್ಯೆಯ ಅಗಾಧತೆಯತ್ತ ಬೆರಳು ಮಾಡುತ್ತದೆ. ಕರ್ನಾಟಕದಲ್ಲಿ ಇದು 1:30 ಇರುವುದು ಸಮಾಧಾನಕರ ಸಂಗತಿ.

ಗುಣಮಟ್ಟದ ಶಿಕ್ಷಣ ಹಾಗೂ ಎಲ್ಲರನ್ನೂ ಒಳಗೊಂಡು ಸಾಗುವಂತಹ ಅಭಿವೃದ್ಧಿಯ ಮಧ್ಯೆ ಇರುವ ಸಂಬಂಧದ ಬಗ್ಗೆ ನಾವು ಹೆಚ್ಚು ಮಾತಾಡುತ್ತಿಲ್ಲ. ನಿಜ; ಎನ್‌ಆರ್‌ಇಜಿಎ ಹಾಗೂ ಪಿಡಿಎಸ್ ಯೋಜನೆಗಳಂತಹವು ಬಡ ಜನರ ಬದುಕಿಗೆ ಸದ್ಯದ ಪರಿಹಾರ ಕ್ರಮಗಳಾಗಬಹುದು. ಆದರೆ ಸ್ಪರ್ಧಾತ್ಮಕ ಜಗತ್ತಿನಲ್ಲಿ, ಶಿಕ್ಷಣ ಎಂಬುದು ರಾಷ್ಟ್ರದ ಅಭಿವೃದ್ಧಿ ಅಳೆಯುವ ಸಾಧನವಾಗಿರುತ್ತದೆ. ಮಾನವ ಸಂಪನ್ಮೂಲ ಅಭಿವೃದ್ಧಿಗೆ ಗುಣಮಟ್ಟದ ಶಿಕ್ಷಕರಿರಬೇಕು; ಪ್ರತಿ ಮಗುವಿಗೂ ಶಿಕ್ಷಕರ ಅಗತ್ಯ ಇದೆ ಎಂಬ ಅಂಶವನ್ನು ನಾವು ಅರಿತುಕೊಳ್ಳಬೇಕಿದೆ.

ಹೆಚ್ಚು ಬಿ.ಎಡ್ ಹಾಗೂ ಎಂ.ಎಡ್ ಕಾಲೇಜುಗಳನ್ನು ತೆರೆಯುವ ಅಗತ್ಯದ ಬಗ್ಗೆಯೂ ಸಚಿವ ಕಪಿಲ್ ಸಿಬಲ್ ಒತ್ತು ನೀಡಿದ್ದಾರೆ. ಆದರೆ ಶಿಕ್ಷಕ ಹುದ್ದೆಯನ್ನು ವೃತ್ತಿ ಆಯ್ಕೆಯಾಗಿ ಯುವಜನರು ಪರಿಗಣಿಸಲು ಶಿಕ್ಷಕರ ವೇತನ, ಇತರ ಉದ್ಯಮಗಳ ಜೊತೆಗೆ ಹೋಲಿಸಿದಲ್ಲಿ ಸ್ಪರ್ಧಾತ್ಮಕವಾಗಿರಲೇಬೇಕು. ಶಿಕ್ಷಕರಾಗಲು ನಿಮ್ಮಲ್ಲಿ ವೃತ್ತಿ ವ್ಯಾಮೋಹವಿರಬೇಕು ಎಂಬ ಮಾತು ಸರಿ. ಆದರೆ ಸರ್ಕಾರಿ ಶಾಲೆ ಶಿಕ್ಷಕರಿಗೆ ಅವರ ಕುಟುಂಬದ ಹೊಟ್ಟೆಪಾಡಿನ ವಿಚಾರವೂ ಮುಖ್ಯವಾಗಿರುತ್ತದಲ್ಲವೆ? ಸಂಶೋಧನೆ ಹಾಗೂ ಶಿಕ್ಷಣ ವಲಯವನ್ನು ಅತ್ಯುತ್ತಮ ಕೆರಿಯರ್ ಆಗಿಸುವತ್ತಲೂ ಶಿಕ್ಷಣ ತಜ್ಞರು ಕೆಲಸ ಮಾಡಬೇಕಿದೆ. ವಿಶ್ವದಾದ್ಯಂತ 'ಅತ್ಯುತ್ತಮ ಮನಸ್ಸು'ಗಳು ಶಿಕ್ಷಕ ವೃತ್ತಿಯೆಡೆ ತುಡಿಯುತ್ತವೆ ಎಂಬುದನ್ನೂ ನಾವಿಂದು ಗಮನಿಸಬೇಕಿದೆ. ಆದರೆ ಇದು ಭಾರತದಲ್ಲಿ ಏಕೆ ಸಾಧ್ಯವಾಗುತ್ತಿಲ್ಲ? ದೇಶದ ಮುನ್ನಡೆಗೆ ಬರೀ ಡಾಕ್ಟರ್, ಎಂಜಿನಿಯರ್ ಅಥವಾ ಎಂಬಿಎ ಗಳಷ್ಟೇ ಇದ್ದರೆ ಸಾಕೆ ಎಂಬ ಬಗ್ಗೆ ನಮ್ಮಲ್ಲೇ ಆತ್ಮಾವಲೋಕನ ಅಗತ್ಯ.

■ ಸಿ.ಜಿ. ಮಂಜುಳಾ